



(6ನೇ ಪುಟದಿಂದ)

ಕಾಲಕಾಲಕ್ಕೆ ಹುಲ್ಲು, ಕಣಿಕೆ ಹಾಕಿ ಬೆಳೆಸುವುದಲ್ಲದೇ, ಆಗಾಗ ಅವುಗಳ ಮೈ ತೊಳೆದು ದೇಹ ಮಿರಿ ಮಿರಿ ಮಿಂಚುವ ಹಾಗೆ ಮಾಡುತ್ತಾರೆ. ಕೊಂಬು ಮತ್ತು ಕಾಲುಗಳ ಕಾಳಜಿ ವಹಿಸುವುದೂ ಇದೆ. ವಿಶೇಷವಾಗಿ ಎತ್ತುಗಳ ಕೊಂಬುಗಳು ಹೆಚ್ಚು ಒರಟಾದಾಗ ಪಾಲಿಶ್ ಮಾಡುವುದರ ಜೊತೆಗೆ ತುದಿಗಳು ಹರಿತವಾದಾಗೆಲ್ಲ ಅವುಗಳನ್ನು ಕತ್ತರಿಸಿ ಒಪ್ಪವಾಗಿಸುತ್ತಾರೆ. ಪಾಲಿಶ್ ಮಾಡಿದ ಕೊಂಬುಗಳಿಗೆ ಬಣ್ಣಗಳಿಂದ ಅಲಂಕರಿಸುವುದು, ಕೊರಳಿಗೆ ಚಂದದ ಗಂಟೆ, ಗೆಜ್ಜೆಗಳನ್ನು ಕಟ್ಟಿ ಸಂಭ್ರಮಿಸುವುದು ಕೂಡ ಅವರ ಜಾನುವಾರಗಳ ಮೇಲಿನ ಪ್ರೀತಿ, ಮಮತೆಯನ್ನು ಸೂಚಿಸುತ್ತದೆ.

ಈ ಹಿನ್ನೆಲೆಯಲ್ಲಿ ಎತ್ತುಗಳ ಮೂಗುದಾರದಿಂದ ಹಿಡಿದು ಅವುಗಳ ಕೊಂಬುಗಳಿಗೆ ಕಟ್ಟುವ ಝುಮುಕಿವರೆಗಿನ ಎಲ್ಲ ವಸ್ತುಗಳ ಮಾರಾಟದ ಮಳಿಗೆಗಳು ಎಲ್ಲೆಡೆ ಜಾತ್ರೆ, ಸಂತೆಯಲ್ಲಿ ತಲೆ ಎತ್ತುತ್ತವೆ. ಒಪ್ಪವಾಗಿ ಜೋಡಿಸಿಟ್ಟ ವಸ್ತುಗಳ ಅಂಗಡಿಗಳು ಸುಂದರ ಕ್ಯಾನವಾಸ್‌ನಂತೆ ಸೆಳೆಯುತ್ತವೆ. ಅವುಗಳಿಗೆ ಬಳಸುವ ಫ್ಲೊರಸೆಂಟ್ ಬಣ್ಣ, ಗಟ್ಟಿಯಾದ ದಾರಗಳು, ಬಾರುಕೋಲು... ಸುಂದರ ಕಲಾಕೃತಿಯಂತೆ ವಿನ್ಯಾಸಗೊಂಡಿರುತ್ತವೆ. ಚರ್ಮ, ದಾರ, ಕಬ್ಬಿಣ ಅಥವಾ ತಾಮ್ರದ ಲೋಹಗಳಿಂದ ಮಾಡಿದ ಈ ಅಲಂಕಾರಿಕ ವಸ್ತುಗಳು ಜಾನುವಾರಗಳ ಸೌಂದರ್ಯ ಹೆಚ್ಚಿಸುವುದಷ್ಟೇ ಅಲ್ಲ ಅಗತ್ಯ ಪರಿಕರಗಳು ಕೂಡ. ಇದಕ್ಕೆ ಸಂಬಂಧಿಸಿದ ಲಕ್ಷಾಂತರ ರೂಪಾಯಿಗಳ ವಹಿವಾಟು ಪ್ರತಿ ಸಂತೆಗಳು ಮತ್ತು ಜಾತ್ರೆಗಳಲ್ಲಿ ನಡೆಯುತ್ತದೆ. ವಿಶೇಷ–ವೆಂದರೆ ಈ ವ್ಯಾಪಾರದಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ!